ದಸ್ತಾವೇಜು ನಂಬರ್.	ದಸ್ತಾವೇಜು ಖರೀದಿಯ.	ರಿಜಿಸ್ಟರ್ ಬರ್ಸ್ದಾಗಿ ದಾಖಲು ಖರೀದಿಯ.	ರಿಜಿಸ್ಟರ್ ಮಾಡಿದ.	ದಸ್ತಾವೇಜು ಬರೆಯಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
31 1882—83	16—4—82	19—6—82	26—6—82	ವಡ್ಡರ ಮಲ್ಲೇನಹಳ್ಳಿ ಗ್ರಾಮದ ಪೋರಣಿನ ಮಗ ಸುಬ್ಬ	ವಡ್ಡರಹಳ್ಳಿ ಗ್ರಾಮದ ಬಸವಲಿಂಗಯ್ಯ	50 ರೂಪಾಯಿಗೆ ವಡ್ಡರಹಳ್ಳಿಯಲ್ಲಿ ತನ್ನ ಹೆಸರಿಗೆ ಇರತಕ್ಕ ಕೆಲವು ಜಮೀನುಗಳು ಖರೀದಿಗೆ ಕೊಟ್ಟರುವದಾಗಿ ವಗೈರೆ.

ಪಿ. ಎಸ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 162.

ಮೃತಪಟ್ಟ ದೊಡ್ಡ ತಮ್ಮಯ್ಯ ವೆರಫ್ ಚಲುವರಾಯಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಚಂದ್ರಯ್ಯ, ಮೃತಪಟ್ಟ ಸದರೀ ದೊಡ್ಡ ತಮ್ಮಯ್ಯ ವೆರಫ್ ಚಲುವರಾಯಪ್ಪನಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಚನ್ನರಾಯಪಟ್ಟಣ ತಾಲ್ಲೂಕು ಶ್ರವಣಬೆಳಗುಳ ಸ್ಥಳದ ಸದರೀ ಚಂದ್ರಯ್ಯನು, ಸದರೀ ವಾಸಸ್ಥನಾಗಿ ಮೃತಪಟ್ಟ ದೊಡ್ಡ ತಮ್ಮಯ್ಯ ವೆರಫ್ ಚಲುವರಾಯಪ್ಪನ ಜೊದಗಿ ಬಗ್ಯಾಗಿ ಬರತಕ್ಕ 950 ರೂಪಾಯಿಗಳ ಸಾಲಗಳನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚಂದ್ರಯ್ಯನ ಅರ್ಜೀಯನ್ನು 1884ನೇ ಇಸವಿ ಜುಲೈ ತಿಂಗಳು ತಾರೀಖು 29ರಲ್ಲು ಮೈಸೂರು ವೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಸಿ ವಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡ ತಮ್ಮಯ್ಯ ವೆರಫ್ ಚಲುವರಾಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಸ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 167.

ಮೃತಪಟ್ಟ ಸಿದ್ದನಮಗ ಲಿಂಗನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಲಿಂಗನು, ಮೃತಪಟ್ಟ ಸದರೀ ಸಿದ್ದನಮಗೆ ಲಿಂಗನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜನಗೂಡು ತಾಲ್ಲೂಕು ನಗರ್ಲೆ ಸ್ಥಳದ ಲ್ಲಿಂಗನು ಸದರೀ ವಾಸಸ್ಥನಾಗಿ ಮೃತಪಟ್ಟ ಸಿದ್ದನಮಗ ಲಿಂಗನ ಜೊದಗಿ ಬಗ್ಯಾಗಿ ಬರತಕ್ಕ 50 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ವೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ವಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಲಿಂಗನ ಅರ್ಜೀಯನ್ನು 1884ನೇ ಇಸವಿ ಜುಲೈ ತಿಂಗಳು ತಾರೀಖು 29ರಲ್ಲು ಮೈಸೂರು ವೊಕ್ಕಾಂ ಈ ಕೋರ್ಟು ರೂಬರೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಸಿ ವಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದನ ಮಗ ಲಿಂಗನ ಆಸ್ತಿಗೆ ಹಕ್ಕುದಾರರಾದ ವಿಸ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸ್ಯ 1884ನೇ ಇಸವಿ ಅರ್ಜೀ ನಂಬರ್ 172.

ಮೃತಪಟ್ಟ ಕುಳ್ಳಮಾದಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗುರುನಂಜಯ್ಯ ಮೈನರ್ ಗಾರ್ಡಿಯರ್ ಮತ್ತು ತಾಯಿ ಮಾದಮ್ಮ, ಮೃತಪಟ್ಟ ಸದರೀ ಕುಳ್ಳಮಾದಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಳಂದೂರು ತಾಲ್ಲೂಕು ಜೋಡಿ ಅಂಬಳೆ ಸ್ಥಳದ ಸದರೀ ಅರ್ಜೀದಾರನು ಸದರೀ ವಾಸಸ್ಥನಾಗಿ ಮೃತ

ಪಟ್ಟ ಕುಳ್ಳವಾದಯ್ಯನ ಜಿಂದಗಿಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗುರುರು ನಂಜಯ್ಯ ಮೈನರ್ ಗಾರ್ಡಿಯರ್ ಮತ್ತು ತಾಯಿ ಮಾದಮ್ಮನ ಅರ್ಜೀಯನ್ನು 1884ನೆ ಇಸವೀ ಜುಲೈ ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಳ್ಳವಾದಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 173.

ಮೃತಪಟ್ಟ ಪೀರಸಾಬಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಫಾತ್ಮಾಬಿ ಇವಳ ಮಗಳು ಹುಸೇನಬಿ, ಮೈನರ್ ಗಾರ್ಡಿಯರ್ ಫಾತ್ಮಾಬಿ ತಂದೆ ನೇರ ಅಹಂಮದ, ಮೃತಪಟ್ಟ ಸದರೀ ಪೀರಸಾಬಿಗೆ ಜೆಂಡತಿ ಮತ್ತು ಮಗಳು ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಅರ್ಜೀದಾರು ಸದರೀ ವಾಸಸ್ಥಾನಾಗಿ ಮೃತಪಟ್ಟ ಪೀರಸಾಬಿ ಜಿಂದಗಿ ಬಗ್ಯಾಗಿ ಬರತಕ್ಕ 150 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಫಾತ್ಮಾಬಿ ಇವಳ ಮಗಳು ಹುಸೇನಬಿ ಮೈನರ್ ಇವರ ಗಾರ್ಡಿಯರ್ ಫಾತ್ಮಾಬಿ ತಂದೆ ನೇರ ಅಹಂಮ್ಮದ ಅರ್ಜೀಯನ್ನು 1884ನೇ ಇಸವಿ ಜುಲೈ ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪೀರಸಾಬಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 186.

ಮೃತಪಟ್ಟ ಹಕೀಂ ರಜಾಬೇಗನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಷಂಷೇರ್‌ಬೇಗ, ಮೃತಪಟ್ಟ ಸದರೀ ಹಕೀಂ ರಜಾಬೇಗನಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಮಂಡಿ ಮೊಹಲಾ ಸ್ಥಳದ ಸದರೀ ಷಂಷೇರ್‌ಬೇಗನು ಸದರೀ ವಾಸಸ್ಥನಾಗಿ ಮೃತಪಟ್ಟ ಸದರೀ ಹಕೀಂ ರಜಾಬೇಗನ ಜಿಂದಗಿ ಬಗ್ಯಾಗಿ ಬರತಕ್ಕ 50 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಷಂಷೇರ್‌ಬೇಗನ ಅರ್ಜಿಯನ್ನು 1884ನೇ ಇಸವಿ ಜುಲೈ ತಿಂಗಳು ತಾರೀಖು 29ರಲ್ಲು ಮೈಸೂ ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಕೀಂ ರಜಾಬೇಗನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1884ನೇ ಇಸವಿ ಅರ್ಜೀ ನಂಬರ್ 193.

ಮೃತಪಟ್ಟ ಹಲಗಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಅಪ್ಪಂಣಾಚಾರಿಯು, ಮೃತಪಟ್ಟ ಸದರೀ ಹಲಗಯ್ಯನಿಗೆ ಅಂಣನ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಗಾವಡಗೆರೇ ಹೋಬಳಿ ಮನುಗನಹಳ್ಳಿ ಸ್ಥಳದ ಸದರೀ ಅಪ್ಪಣ್ಣಾಚಾರೀಯು ಸದರೀ ವಾಸಸ್ಥನಾಗಿ ಮೃತಪಟ್ಟ ಹಲಗಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲಗಳನ್ನು ವಸೂಲಿಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಪ್ಪಂಣಾಚಾರಿಯ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲ ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಲಗಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 201.

ಮೃತಪಟ್ಟ ವೆಂಕಟಸಾಮಿಪಿಳ್ಳೆ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಂಗಯ್ಯನು, ಮೃತಪಟ್ಟ ಸದರೀ ವೆಂಕಟಸಾಮಿಪಿಳ್ಳೆಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಟಣ ತಾಲ್ಲೂಕು ಪಾಲಹಳ್ಳಿ ಸ್ಥಳದ ಸದರೀ ರಂಗಯ್ಯನು, ಸದರೀ ವಾಸಸ್ಥನಾಗಿ ಮೃತಪಟ್ಟ ವೆಂಕಟಸಾಮಿಪಿಳ್ಳೇ ಜೆಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರಂಗಯ್ಯನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟು ರೂಬರೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ವೆಂಕಟಸಾಮಿಪಿಳ್ಳೇ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಅರ್ಜೀ ನಂಬರ್ 202.

ಮೃತಪಟ್ಟ ಕುಳ್ಳೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪುಟ್ಟಸ್ವಾಮಿ ಮೃತಪಟ್ಟ ಸದರೀ ಕುಳ್ಳೇಗೌಡನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು ತಾಲ್ಲೂಕು ಗಾವಡಗೆರೆ ಹೋಬಳಿ ರಂಗೈನ ಕೊಪ್ಪಲು ಸ್ಥಳದ ಸದರೀ ಪುಟ್ಟಸ್ವಾಮಿಯು ಸದರೀ ವಾಸಸ್ಥನಾಗಿ ಮೃತಪಟ್ಟ ಸದರೀ ಕುಳ್ಳೇಗೌಡನ ಜೆಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಪುಟ್ಟಸ್ವಾಮಿ, ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತ ಪಟ್ಟ ಕುಳ್ಳೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಜುಲೈ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ರ್ಯ. ನರಸಿಹ್ಮಯ್ಯಂಗಾರ್, ಡಿಸ್ಟ್ರಿಕ್ಟು ಜಡ್ಜ.

ನಂ. 3. ತಾರೀಖು 1ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ಹೊಳೇ ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಜೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುಕ್ತಾರೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಆಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರು ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು; ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
27 1881—82	ಚೆನ್ನರಾಯಪಟ್ಟಣ ತಾಲ್ಲೂಕು ಜಂಬೂರು ಗ್ರಾಮದ ಸ್ಮಾರ್ತ ಬ್ರಾಹ್ಮಣ ಪನ್ ವರ್ಷ ವೆಂಕಟರಮಣಯ್ಯನವರ ಮಗ ಜೀರಾಯತು ಜೀವನದ ಮೈಲಾರಯ್ಯ	ಮೈಸೂರು ಕಿಲ್ಲೆಯಲ್ಲಿರುವ ಅರಮನೆ ಇಲಾಖೆ ಮಾಯಿತು ಕಛೇರಿ ರಸ್ತೇದಾರ ಸ್ಮಾರ್ತ ಬ್ರಾಹ್ಮಣ ಶಿವರಾಮಯ್ಯನವರ ಮಕ್ಕಳು ನಂಜಪ್ಪ	14—6—82	14—6—82	180 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.